ಅಧ್ಯಕ್ಷರು : ಈಗ ಸತ್ತು ಹೋಗದಂತೆ ಬದುಕಿಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ, ಆಮೇಲೆ ಟೆಂಡರ್ ಹಾಕಿಕೊಳ್ಳೋಣ.

ಶ್ರೀ ವಿ. ಸೋಮಣ್ಣ : ಸನ್ಮಾನ್ಯ ಅಧ್ಯಕ್ಷರೆ, ನಾನು ಬರ್ಮಾಬಜಾರ್ ಮತ್ತು ಗುಪ್ತ ಮಾರ್ಕೆಟ್‌ಗೆ ನಾನೂ ಕೂಡ ಹೋಗಿ ನೋಡಿ ಬಂದಿದ್ದೇನೆ. ನಾನು ಮಂತ್ರಿ ಆದಮೇಲೆ ಮೊದಲನೆ ಬಾರಿಗೆ ಯುಟಿಲಿಟಿ ಬಿಲ್ಡಿಂಗ್‌ಗೆ ನೋಟಿಸ್‌ನ್ನು ಕೊಡಿಸಿದ್ದೇನೆ. ಈ ಬಿಲ್ಡಿಂಗ್ ಕಾರ್ಪೋರೇಷನ್ ಆಸ್ತಿತ್ವದಲ್ಲಿ ಇದ್ದರೂ ಕೂಡ ಸಾರ್ವಜನಿಕರ ಪ್ರಾಣ ರಕ್ಷಣೆ ಅಗತ್ಯ ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದ ತಕ್ಷಣವೇ ಅಗ್ನಿಶಾಮಕ ಇಲಾಖೆ ಚುರುಕಾಗಿ ಕೆಲಸ ಮಾಡುತ್ತದೆ. ಇನ್ನು 8-10 ದಿವಸದಲ್ಲಿ ಈ ಕಾನೂನು ತಿದ್ದುಪಡಿ ಮಾಡದೆ ಹೋದರೆ ನಮ್ಮ ಇಲಾಖೆಗೆ ಸ್ವತಂತ್ರವಾಗಿ ಕೆಲಸ ನಿರ್ವಹಣೆ ಮಾಡುವುದಕ್ಕೆ ಅಧಿಕಾರ ಇಲ್ಲದೆ ಇರುವುದರಿಂದ, ಇದನ್ನು ತಕ್ಷಣ ಕ್ರಮ ಕೈಗೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಾನೂನು ತಿದ್ದುಪಡಿ ಮಾಡಿದ ಮೇಲೆ ನಿರ್ದಿಷ್ಟ ಅವಧಿಯಲ್ಲಿ ನೀವು ಏನು ಕ್ರಮ ಕೈಗೊಳ್ಳುತ್ತೀರಾ ಅದನ್ನು ಮುಂದೆ ತಿಳಿಸಬೇಕು.

ಶ್ರೀ ವಿ. ಸೋಮಣ್ಣ : ಸನ್ಮಾನ್ಯ ಅಧ್ಯಕ್ಷರೆ, ಇವೆಲ್ಲಕ್ಕೂ ಕೂಡ ನಾವು ಪೂರಕವಾಗಿ 15 ದಿವಸಗಳಿಂದ ಚರ್ಚೆ ಮಾಡಿ ಇಲ್ಲಿ ಇರತಕ್ಕಂಥ ಅವ್ಯವಸ್ಥೆಯನ್ನು ಸಾರ್ವಜನಿಕರ ದೃಷ್ಟಿಯಿಂದ ಸರಿಪಡಿಸಬೇಕು ಎಂದು ಕೆಲವು ನಿಬಂಧನೆಗಳನ್ನು ಈಗಾಗಲೇ ಮಾಡಿದ್ದೇವೆ. ಅದರ ಬಗ್ಗೆ ತಿದ್ದುಪಡಿ ತಂದು ಬಹುಶಃ ಬೆಂಗಳೂರು ನಗರ ಮಾತ್ರ ಅಲ್ಲ, ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ಕೂಡ ಒಂದು ಅನುಕೂಲವಾದಂತಹ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ನಮ್ಮ ಇಲಾಖೆ ಮುಂದಾಗುತ್ತದೆ.

ಭಟ್ಕಳದಲ್ಲಿ ಕೆ.ಇ.ಬಿ. ಮಳಿಗೆಯನ್ನು ಮುಚ್ಚಿರುವುದು

317 - ಶ್ರೀ ಶಿವಾನಂದ ನಾಯ್ಕ್ (ಭಟ್ಕಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳದಲ್ಲಿರುವ ಕರ್ನಾಟಕ ವಿದ್ಯುತ್ ಮಂಡಳಿಯ ಉಗ್ರಾಣವನ್ನು ಮುಚ್ಚಲು ಕಾರಣವೇನು?

ಆ) ಇದನ್ನು ಯಾವಾಗ ತೆರೆಯಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಭಟ್ಕಳದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಉಗ್ರಾಣವು ಕಾರ್ಯ ನಿರ್ವಹಿಸುತ್ತಿದೆ. ಸದ್ರಿ ಉಗ್ರಾಣದ - ಉಗ್ರಾಣ ಪಾಲಕರು ವರ್ಗಾವಣೆಯಾಗಿದ್ದು ಸದ್ರಿ ಹುದ್ದೆಯು ಖಾಲಿಯಾಗಿರುತ್ತದೆ. ಆದಾಗ್ಯೂ ಪ್ರಸ್ತುತ ಇರುವ ಸಿಬ್ಬಂದಿಗಳಿಂದ ಉಗ್ರಾಣದ ಕೆಲಸ ಕಾರ್ಯಗಳು ನಡೆಸಲ್ಪಡುತ್ತವೆ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಶಿವಾನಂದ ನಾಯ್ಕ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಅಧಿಕಾರಿಗಳ ತಪ್ಪು ವರದಿಯ ಮೇಲೆ ತಪ್ಪು ಉತ್ತರವನ್ನು ಒದಗಿಸಿದ್ದಾರೆ. ಇದು ಬಂದ್ ಆಗಿ ಈಗಾಗಲೇ ಒಂದು ವರ್ಷ ಆಗಿದೆ, ಖಾಲಿ ಕಟ್ಟಡ ಬಿಟ್ಟರೆ ಅಲ್ಲಿ ಯಾರೇ ಸಿಬ್ಬಂದಿ ಕೆಲಸ ಮಾಡುತ್ತಿಲ್ಲ; ಯಾವುದೇ ವಸ್ತುಗಳು ಸಹ ಅಲ್ಲಿ ಇಲ್ಲ. ಆದುದರಿಂದ, ಅಲ್ಲಿ ಏನು ಕೊರತೆ ಇದೆ ಅದನ್ನು ಸರಿಪಡಿಸಿಕೊಂಡು ಅತೀ ಶೀಘ್ರದಲ್ಲಿ ಉಗ್ರಾಣವನ್ನು ತೆರೆಯಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣ ಬಸಪ್ಪ ದರ್ಶನಾಪುರ್ : ಅದಷ್ಟು ಬೇಗ ಅಲ್ಲಿ ಸ್ಟೋರ್ ಕೀಪರ್ ಹಾಕುವಂಥಹ ವ್ಯವಸ್ಥೆ ಮಾಡಿಕೊಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶಿವಮೊಗ್ಗ ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ

318 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಕಳೆದ ಆರು ತಿಂಗಳಿಂದ ಕೊಲೆ, ಸುಲಿಗೆ, ದರೋಡೆ ಹೆಚ್ಚಾಗುತ್ತಿದ್ದು, ಪೋಲೀಸ್ ಇಲಾಖೆಯ ವೈಫಲ್ಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ತಕ್ಷಣ ಇದನ್ನು ತಡೆಗಟ್ಟುವ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತರಾಗಿರುವರೆ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಕಳೆದ 6 ತಿಂಗಳಲ್ಲಿ ಶಿವಮೊಗ್ಗ ನಗರದಲ್ಲಿ ವರದಿಯಾದ ಕೊಲೆ, ಸುಲಿಗೆ ದರೋಡೆ ಪ್ರಕರಣಗಳ ವಿವರ;

ವರ್ಷ	ಕೊಲೆ	ದರೋಡೆ	ಸುಲಿಗೆ
1997	5	-	7

ಶಿವಮೊಗ್ಗ ನಗರದಲ್ಲಿ ಅಪರಾಧಗಳನ್ನು ಹತೋಟಿಗೆ ತರಲು ಎಲ್ಲಾ ಕ್ರಮಗಳನ್ನು ಇದೀಗ ತೆಗೆದುಕೊಳ್ಳಲಾಗುತ್ತಿದೆ.

ಆ) ಅಪರಾಧಗಳನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಮುಂಜಾಗ್ರತಾ ಕ್ರಮವಾಗಿ ಸಿ.ಆರ್. ಪಿ.ಸಿ. ಕಲಂ 107ರ ಅಡಿಯಲ್ಲಿ 14 ಖಟ್ಲೆಗಳನ್ನು ಇದೀಗ ಹೂಡಲಾಗಿದೆ.
2. ರಾತ್ರಿ ಮತ್ತು ಹಗಲು ಗಸ್ತನ್ನು ಬಿಗಿಗೊಳಿಸಲಾಗಿದೆ.
3. ಮಾಜಿ ಅಪರಾಧಿಗಳ ಮತ್ತು ಎಂ.ಒ.ಬಿ ಅಪರಾಧಿಗಳ ಚಲನವಲನಗಳ ಮೇಲೆ ನಿಗಾ ಇಡಲಾಗಿದೆ.